ಶ್ರೀ ಡಿ.ಕೆ. ಶಿವಕುಮಾರ್ : ಮತ್ತೆ ಇನ್ನೆಷ್ಟು ಮಾತನಾಡಲು ಅವಕಾಶ ಕೊಡುತ್ತೀರಿ? ಈ ಡಿಬೇಟ್ ಅನ್ನು 69 ರಲ್ಲಿ ತೆಗೆದುಕೊಂಡಿದ್ದೀರ ಅಥವಾ ಡಿಮಾಂಡ್ಸ್ ಮೇಲೆ ತೆಗೆದುಕೊಂಡಿದೀರಾ? ನನಗೂ ಈ ಸಬ್ಜೆಕ್ಟ್ ಮೇಲೆ ಮಾತನಾಡಲು ಬಿಡಿ. ಮೂರು ಗಂಟೆಯೇನು ಮೂರು ದಿನ ಬೇಕಾದರು ಮಾತನಾಡುತ್ತೇನೆ. ರೂಲ್ 56 ಅಂದರೇನು ಗೊತ್ತಿಲ್ಲ. ಪಟ್ಟಾ ಅಂದರೆ ಗೊತ್ತಿಲ್ಲ. ನಮ್ಮನ್ನು ಕೂರಿಸಿಕೊಂಡು ಎಷ್ಟು ಅವಕಾಶ ಕೊಡುತ್ತೀರಿ ಅಧ್ಯಕ್ಷರೇ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಪಟ್ಟಾ ಅಂದರೇನು ಎಂಬುದು ಎಲ್ಲಾ ಗೊತ್ತಿದೆ. ನಾನು ಕೇಳುತ್ತಿರುವುದು ಇಷ್ಟೆ : 56 ರೂಲ್ ಪ್ರಕಾರ ಏನು ?

(ಒ) ಚಿಕ್ಕನಾಯಕನಹಳ್ಳಿಯಲ್ಲಿ ಫೋರ್ಜರಿ ಸಾಗುವಳಿ ಚೀಟಿ ತೆಗೆದುಕೊಂಡು ಖಾತೆ ಪಹಣಿ ಮಾಡಿಸಿ ಕೊಂಡಿರುವುದು.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಅಧ್ಯಕ್ಷರೇ ಚಿಕ್ಕನಾಯಕನಹಳ್ಳಿಯಲ್ಲಿ ಫೋರ್ಜರಿ ಸಾಗುವಳಿ ಚೀಟಿ ತೆಗೆದುಕೊಂಡು ಖಾತೆ ಪಹಣಿ ಮಾಡಿಸಿಕೊಂಡು ಜಮೀನುಗಳಲ್ಲಿರುವ ಬೇರೆಯವರನ್ನು ವಕ್ಕಲೆಬ್ಬಿಸಿ ಈಗಾಗಲೇ ಸೆಪರೇಟಾಗಿ ಒಂದು ಮ್ಯುಟೇಷನ್ ರಿಜಿಸ್ಟರ್ ಮೇಂಟೆನ್ ಮಾಡಿ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡು ಇಡೀ ಸರ್ಕಾರ ವ್ಯವಸ್ಥೆಯೇ ಅಸ್ತವ್ಯಸ್ತವಾಗಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಇದನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತಾ. ಅಲ್ಲಿ ಇವತ್ತು ಸುಮಾರು 110 ಸಾಗುವಳಿ ಚೀಟಿಯನ್ನು ಫೋರ್ಜರಿ ಮಾಡಿ ಯಾರೋ ರಿಟೈರಾದ ತಹಸೀಲ್ದಾರ್ ಹೆಸರನ್ನು ಬೇರೆಯವರು ಸೈನ್ ಹಾಕಿ ಖಾತೆ ಪಹಣಿ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆ ಬಗ್ಗೆ ಮತ್ತು ಅಲ್ಲಿ ಎರಡು ಮ್ಯುಟೇಷನ್ ರಿಜಿಸ್ಟರ್‌ಗಳನ್ನು ಮೇಂಟೆನ್ ಮಾಡಿದ್ದಾರೆ ಎಂದು ಹೇಳುತ್ತಾರೆ. ಒಂದು ತಾಲ್ಲೂಕಿಗೆ ಒಂದು ರಿಜಿಸ್ಟರ್ ಇರುವುದು ಕಾನೂನು ಗೊತ್ತಿರುವವರ ಮತ್ತು ನಮ್ಮಗಳ ಅಭಿಪ್ರಾಯ. ಎರಡು ರಿಜಿಸ್ಟರ್ ಇಟ್ಟುಕೊಂಡು ನೀವು ಇದಕ್ಕೆ ಸಾಲ ಕೊಡಬೇಡಿರಿ ಅಂದರೂ ಖಾತೆ ಪಹಣಿ ಮಾಡಿಕೊಟ್ಟಿರುವವರ ಬಗ್ಗೆ ಸರ್ಕಾರ ಗಮನಹರಿಸಿ ಆ ಬಗ್ಗೆ ಒಂದು ಸಿಓಡಿ ತನಿಖೆಯನ್ನು ಯಾಕೆಂದರೆ 1984 ರಲ್ಲಿ ರಿಟೈರಾದ ಒಬ್ಬ ಅಧಿಕಾರಿ ಹೆಸರನ್ನು ಫೋರ್ಜರಿ ಮಾಡಿ ಅವತ್ತೇ ಪಡೆದಿದ್ದು ಎಂದು ಹೇಳಿರುವುದರಿಂದ ವ್ಯಾಪಕವಾದ ಜಾಲವೊಂದು ಇದರ ಹಿಂದೆ ಇರುವುದರಿಂದ ಇದರ ಪೂರ್ಣ ತನಿಖೆಗೆ ಒಂದು ಸಿಓಡಿ ತನಿಖೆಗೆ ನಿಯಮಿಸುತ್ತೀರಾ? ಸತ್ಯಾಂಶವನ್ನು ಆಚೆಗೆ ತಂದು ಯಾರು ವಾಸ್ತವವಾಗಿ ಜಮೀನನ್ನು ಉಳುಮೆ ಮಾಡುತ್ತಿದ್ದರೋ ಅವರಿಗೆ ರಕ್ಷಣೆ ಕೊಡುತ್ತೀರಾ ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಅಧ್ಯಕ್ಷರೇ, ಈ ಮುಂಚೆ ಕೂಡ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಯಾರೋ ನಿವೃತ್ತ ತಹಸೀಲ್ದಾರ್‌ರ ಹೆಸರಿನಲ್ಲಿ ಫೋರ್ಜರಿ ಮಾಡಿ ಮಾಡಿರುವುದು ಬಹಳ ಗುರುತರವಾದ ಆಪಾದನೆ. He is liable for criminal prosecution. ಆದ್ದರಿಂದ ಮಾನ್ಯ ಸಚಿವರು ಬಂದ ತಕ್ಷಣವೇ ಈ ವಿಷಯವನ್ನು ಅವರ ಗಮನಕ್ಕೆ ತಂದು ಅವರ ಮೇಲೆ ತನಿಖೆ ಮಾಡುವುದು ಮತ್ತು ತಪ್ಪಿತಸ್ಥರ ಮೇಲೆ ಕ್ರಿಮಿನಲ್ ಮೊಕದ್ದಮೆ ಕೂಡ ಹಾಕತಕ್ಕದ್ದು ಮಾಡುತ್ತಾ.

ಈ ರೀತಿ ಫೋರ್ಜರಿಯಾಗಿರುವ ಕಾಗದಪತ್ರಗಳ ಮೂಲಕ ಯಾವುದಾದರೂ ಹಕ್ಕುಬಾಧ್ಯತೆ ಮಾಡತಕ್ಕದ್ದು ಅಥವಾ ಅಲ್ಲಿ ಸ್ವಾಧೀನದಲ್ಲಿರುವ ನಿರಪರಾಧಿಗಳನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮಾಡುವುದಾದರೆ ಅದನ್ನು ತಡೆಯಲೂ ಸಹ ನಾನು ಆದೇಶ ಮಾಡಿಸುತ್ತೇನೆ.

(ಓ) ಶಾಲಾ ಮಕ್ಕಳಿಗೆ ಪಡಿತರ ವಿತರಣೆಯಲ್ಲಿ ಅವ್ಯವಹಾರ

ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಅಧ್ಯಕ್ಷರೇ, ಶಾಲಾಮಕ್ಕಳಿಗೆ ಪಡಿತರ ನೀಡುವಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ ಸರ್ಕಾರದ ಗಮನ ಸೆಳೆಯಲು ಇಚ್ಛಿಪಡುತ್ತೇನೆ. ಶಾಲಾಮಕ್ಕಳಿಗೇನು ಉಚಿತ ಅಕ್ಕಿ ನೀಡುತ್ತೀರಿ. ಆ ಅಕ್ಕಿಯನ್ನು ಆ ಮಕ್ಕಳಿಗೆ ಕೊಡುವುದೇ ಇಲ್ಲ. ಎರಡು ಮೂರು ತಿಂಗಳು ಕೊಡದಿರುವ ನ್ಯಾಯಬೆಲೆ ಅಂಗಡಿಗಳಿಗೆ ಸರ್ಕಾರ ರಕ್ಷಣೆ ನೀಡುತ್ತಿದ್ದಾರೆಂದರೆ ಜನಸಾಮಾನ್ಯರು ಏನು ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಸರಿಯಾದ ಉತ್ತರ ಕೊಡಬೇಕಾಗಿದೆ. ಅದಕ್ಕೆ ಕಾರಣವೇನೆಂದರೆ, ನನ್ನ ಕ್ಷೇತ್ರದಲ್ಲಿ ಬೆಂಡಿಗಾನಹಳ್ಳಿ ಎಂಬ ಗ್ರಾಮವಿದೆ. ಅಲ್ಲಿನ ನ್ಯಾಯಬೆಲೆ ಅಂಗಡಿಯಲ್ಲಿ ಶಾಲಾಮಕ್ಕಳಿಗೆ ಯಾವ ಅಕ್ಕಿಯನ್ನೂ ನೀಡಲಿಲ್ಲವೆಂದು ಫುಡ್ ಅಸಿಸ್ಟೆಂಟ್ ವರದಿ ಹಾಕಿದ್ದರೂ ಸಹ ಸಸ್ಪೆಂಡ್ ಮಾಡಿದ್ದಕ್ಕೆ ಸರ್ಕಾರವೇ ಸ್ಟೇ ಕೊಟ್ಟಿದೆ. ಇಂಥ ವ್ಯವಸ್ಥೆ ಬಗ್ಗೆ ಸರ್ಕಾರ ಗಮನಹರಿಸಬೇಕು. ಅದರ ಜೊತೆಗೆ ನಮ್ಮಲ್ಲಿ ಇನ್ನೊಂದು ವ್ಯವಸ್ಥೆ ಇದೆ. ನಾನು ಹಳ್ಳಿಗಳ ಮೇಲೆ ಹೋಗುತ್ತಾ ಇದ್ದೆ. ಶಾಲಾ ಮಕ್ಕಳು ಎರಡು ಮೈಲಿ ನಡೆದುಕೊಂಡು ಹೋಗುತ್ತಿದ್ದರು. ಎಲ್ಲಿಗಪ್ಪ ನಡೆಸಿಕೊಂಡು ಹೋಗುತ್ತಿದ್ದೀರಿ ಎಂದು ಟೀಚರನ್ನು ಕೇಳಿದೆ. ಸ್ವಾಮಿ ಅಕ್ಕಿ ಕೊಡಿಸಬೇಕು, ಅದಕ್ಕೇ ನಡೆಸಿಕೊಂಡು ಹೋಗುತ್ತಿದ್ದೇನೆ ಅಂದರು. ತಿಂಗಳಿಗೊಂದು ಸಲ ಮಧ್ಯಾಹ್ನ ಶಾಲೆಗೆ ರಜೆ ಕೊಟ್ಟು ಮಕ್ಕಳನ್ನು ಎರಡು ಮೈಲಿ ನಡೆಸಿಕೊಂಡು ಹೋಗಬೇಕು ಅಂದರು. ಪ್ರತಿ ಪ್ರಾಥಮಿಕ ಶಾಲಾ ಮಗು ಪ್ರತಿ ತಿಂಗಳು ನ್ಯಾಯಬೆಲೆ ಅಂಗಡಿ ಮುಂದೆ ಕ್ಯೂ ನಿಂತುಕೊಳ್ಳಬೇಕು : ಜೋಳಿಗೆ ಹಿಡಿದುಕೊಂಡು. ನನಗೊಂದು ಅನುಮಾನ ಬಂದುಬಿಟ್ಟಿದೆ : ನಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕಾದರೆ ಮೊದಲು ಜೋಳಿಗೆ ತೆಗೆಯಬೇಕಾ, ಪುಸ್ತಕ ತೆಗೆಯಬೇಕಾ ? ಜೋಳಿಗೆ ಸಮೇತ ಮಕ್ಕಳು ಎರಡು ಮೂರು ಮೈಲಿಗಳು ನಡೆಯುವುದನ್ನು ತಪ್ಪಿಸುವ ಬಗ್ಗೆ ಸರ್ಕಾರ ಗಮನಹರಿಸಿ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಶಾಲಾ ಮಕ್ಕಳಿಗೆ ಉಚಿತವಾಗಿ ತಿಂಗಳಿಗೆ 3 ಕೆ.ಜಿ. ಅಕ್ಕಿ ಅಥವಾ ಗೋಧಿ ನೀಡುವ ಕಾರ್ಯಕ್ರಮವಿದೆ. ಶಾಲಾ ಹಾಜರಾತಿಯನ್ನು ಹೆಚ್ಚಿಸುವ ಸಲುವಾಗಿ ಕೇಂದ್ರ ಸರ್ಕಾರ ನೀಡುವ ಉಚಿತ ಅಕ್ಕಿ ಹಾಗೂ ಗೋಧಿಯನ್ನು ಹಂಚುವ ವ್ಯವಸ್ಥೆ ಇದು. ಇದಕ್ಕೆ ವಿದ್ಯಾರ್ಥಿಯ ಶೇ. 80 ಹಾಜರಾತಿ ಅಗತ್ಯ. ಈ ಬಗ್ಗೆ ಅವ್ಯವಹಾರ ಆಗದಂತೆ ಎಲ್ಲಾ ಬಿಗಿಕ್ರಮ ತೆಗೆದುಕೊಳ್ಳಲಾಗಿದೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಒಂದು ನಿರ್ದಿಷ್ಟ ದಿನಗಳಲ್ಲಿ ಶಾಲೆ ಮಕ್ಕಳನ್ನು ಕರೆದುಕೊಂಡು ಅಧ್ಯಾಪಕರ ಸಮ್ಮುಖದಲ್ಲಿ ಹಂಚಲಾಗುತ್ತಿದೆ. ಎಲ್ಲಾದರೂ ಈ ಬಗ್ಗೆ ದೂರು ಬಂದರೆ ಜಿಲ್ಲಾಧಿಕಾರಿಗಳ ಮೂಲಕ ತನಿಖೆ ನಡೆಸಿ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಶಾಸಕರು ಎಲ್ಲಿ ಅವ್ಯವಹಾರ ನಡೆದಿದೆ ಎಂದು ನಿರ್ದಿಷ್ಟವಾಗಿ ತಿಳಿಸಿದಲ್ಲಿ ಕೂಡಲೇ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು. ಯಾವ ರೀತಿ ಇದನ್ನು ಅಕ್ಕಿ ಹಂಚುವುದನ್ನು ಮಾಡೋಣ? ಒಂದು ವೇಳೆ ಉಪಾಧ್ಯಾಯರಿಗೆ ಅಕ್ಕಿ ಹಂಚಲು ಹೇಳಿದರೆ ಕೆಲವು